**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *17.03.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಯು.ಎಸ್ ರವರಿಂದಃ**

. ನನ್ನ ರಿಯಲ್ ಎಸ್ಟೇಟ್ ವ್ಯವಹಾರದ ಕುರಿತು ದಾಖಲೆಯಿಲ್ಲ. ನಮ್ಮ ಮನೆಯಿಂದ ಅಗ್ರಹಾರ 8-10 ಕಿಮೀ ದೂರವಿದೆ ಎಂದರೆ ನಿಜ. 15 ವರ್ಷಗಳಿಂದ ನನಗೆ ನವೀನ್ ಕುಮಾರ್ ನ ಪರಿಚಯ ಇದೆ. ನವೀನ್ ಕುಮಾರ್ ನಾಯಿ ಸಾಕಾಣಿಕೆ ಕೆಲಸ ಮಾಡುತ್ತಾರೆ. ನಾನು ಮತ್ತು ನವೀನ್ ಕುಮಾರ್ ಒಬ್ಬರಿಗೊಬ್ಬರ ಮನೆಗಳಿಗೆ ಹೊಗುವುದಿಲ್ಲ. ಈ ಘಟನೆಗಿಂತ ಮೊದಲು ಯಾವತ್ತು ನಾವು ನವೀನ್ ಕುಮಾರ್ ಬರ್ತ್ ಡೇ ಆಚರಣೆ ಮಾಡಿಲ್ಲ. ಆದರೆ ಶುಭಾಶಯ ಕೋರುತ್ತಿದ್ದೆವು. ಅಕ್ಟೋಬರ್ 2 ರಂದು ನವೀನ್ ಕುಮಾರ್ ನ ಜನ್ಮ ದಿನ. ಆ ದಿನದಂದು ನವೀನ್ ಕುಮಾರ್ ಊರಲ್ಲಿ ಇರಲಿಲ್ಲವಾದ್ದರಿಂದ ಶುಭಾಶಯ ಕೋರಲು ಹೋಗಿರಲಿಲ್ಲ. ಫೋನ್ ನಲ್ಲಿ ಸಹ ಶುಭಾಶಯ ಕೋರಿರಲಿಲ್ಲ. ಆ ದಿನ ನವೀನ್ ಕುಮಾರ್ ಎಲ್ಲಿಗೆ ಹೋಗಿದ್ದ ಎಂದು ಗೊತ್ತಿಲ್ಲ. ಮರುದಿನವೂ ಸಹ ಫೋನ್ ನಲ್ಲಿ ಸಿಗದೇ ಇದುದ್ದರಿಂದ ಶುಭಾಶಯ ಕೋರಿರಲಿಲ್ಲ. ದಿಃ04.10.2020 ರಂದು ಸಂಜೆ 7 ಗಂಟೆಗೆ ನವೀನ್ ಕುಮಾರ್ ಮನೆಗೆ ಹೋಗಿದ್ದೆವು. ಆ ಕಾಲಕ್ಕೆ ನಾನು ಮತ್ತು ಪವನ್ ಕುಮಾರ್ ಹೋಗಿದ್ದೆವು. ಆ ದಿನ ನಾನು ಪವನ್ ಮನೆ ಬಳಿ ಹೋಗಿ ಅಲ್ಲಿಂದ ಇಬ್ಬರು ಸೇರಿ ನವೀನ್ ಕುಮಾರ್ ಮನೆಗೆ ಹೋಗಿದ್ದೆವು. ಪವನ್ ಕುಮಾರ್ ಮನೆ ರಾಮಾನುಜ ರಸ್ತೆಯಲ್ಲಿ ಇದೆ. ಪವನ್ ಕುಮಾರ್ ಮನೆಯಿಂದ ನವೀನ್ ಕುಮಾರ್ ಮನೆ 600-700 ಮೀ ದೂರವಿದೆ. ಆ ಕಾಲಕ್ಕೆ ನವೀನ್ ಕುಮಾರ್ ಮನೆಯ ಒಳಗೆ ಹೋಗಿರಲಿಲ್ಲ. ಹೊರಗಡೆ ಕುಳಿತು ಮಾತನಾಡುತ್ತಿದ್ದೆವು. ರಾತ್ರಿ 11.30 ರವರೆಗೆ ಮನೆಯ ಮುಂದಗಡೆ ಕುಳಿತಿದ್ದೆವು. ನಾನು ಮದ್ಯಪಾನ ಮಾಡುವುದಿಲ್ಲ. ನನಗೆ ಪ್ರತಿದಿನ ಮದ್ಯ ಸೇವನೆ ಮಾಡುವ ಅಭ್ಯಾಸವಿದೆ ಎಂದರೆ ಸರಿಯಲ್ಲ. ಆ ದಿನ ಸಂಜೆ ನಾವು ಊಟ ಮಾಡಿರಲಿಲ್ಲ. ಆ ದಿನ ನಾವು

ನವೀನ್ ಕುಮಾರ್ ನನ್ನು ಬೇರೆ ಎಲ್ಲಿಗೂ ಕರೆದುಕೊಂಡು ಹೋಗಿರಲಿಲ್ಲ. ಪದ್ಮ ತಿಯೇಟರ್ ಮುಂಭಾಗದಲ್ಲಿ ರಾತ್ರಿ ವೇಳೆಯಲ್ಲೂ ಸಹ ಹೋಟೆಲ್ ಮತ್ತು ಟೀ ಅಂಗಡಿಗಳು ತೆರೆದಿರುತ್ತವೆ ಎಂದರೆ ನಿಜ. ಅಗ್ರಹಾರ ಸರ್ಕಲ್ ನಲ್ಲಿ ಟೀ ಅಂಗಡಿ ತೆರೆದಿರುತ್ತವೆ ಎಂದರೆ ಇರಬಹುದು. ಜೆ.ಎಸ್.ಎಸ್ ಮುಂಭಾಗದಲ್ಲಿ ಸಹ ರಾತ್ರಿ ವೇಳೆಯಲ್ಲಿ ಟೀ ಅಂಗಡಿ ತೆರೆದಿರುತ್ತವೆ ಎಂದರೆ ಗೊತ್ತಿಲ್ಲ. ಸೀತಾರಂಗ ಆಸ್ಪತ್ರೆಯ ಸರ್ಕಲ್ ನಲ್ಲೂ ಸಹ ರಾತ್ರಿ ವೇಳೆಯಲ್ಲಿ ಟೀ ಅಂಗಡಿ ತೆರೆದಿರುತ್ತವೆ ಎಂದರೆ ಗೊತ್ತಿಲ್ಲ. ಆ ದಿನ ಪದ್ಮ ತಿಯೇಟರ್ ಟೀ ಕುಡಿಯಲು ಹೋಗಲು ತೊಂದರೆ ಇರಲಿಲ್ಲ. ಆ ದಿನ ಎಂ.ಜಿ.ರಸ್ತೆಯಲ್ಲಿರುವ ಬ್ರಿಡ್ಜ್ ಮತ್ತು ಮೈಸೂರು ಮಾಲ್ ಮಧ್ಯದಲ್ಲಿ ಸಿಗುವ ಅಂಗಡಿಯಲ್ಲಿ ಟೀ ಕುಡಿದಿದ್ದೆವು. ಆ ಸ್ಥಳದಲ್ಲಿ ಮಾರ್ಕೆಟ್ ಗೆ ಬರುವವರು ತುಂಬಾ ಜನ ಇರುತ್ತಾರೆ ಎಂದರೆ ನಿಜ. ಆ ರಸ್ತೆಯಲ್ಲಿ ಸಿದ್ದಪ್ಪ ಸ್ಕ್ವೇರ್ ವರೆಗೆ ವಾಹನಗಳು ಓಡಾಡುತ್ತವೆ ಎಂದರೆ ನಿಜ. ಟೀ ಅಂಗಡಿ ಬಳಿ 12-12.30 ರವರೆಗೆ ಇದ್ದೆವು.

2. ಬ್ರಿಡ್ಜ್ ಮತ್ತು ಆಸ್ಪತ್ರೆಯ ಮಧ್ಯದಲ್ಲಿ ಹಂಪ್ಸ್ ಗಳು ಇವೆ ಎಂದರೆ ನಿಜ. ಜೆ.ಎಸ್.ಎಸ್ ಆಸ್ಪತ್ರೆಯ ಬಳಿ ರಾತ್ರಿಯೆಲ್ಲಾ ಜನ ಇರುತ್ತಾರೆ ಎಂದರೆ ನಿಜ. ಆ ಆಸ್ಪತ್ರೆಯ ಮುಖ್ಯ ಗೇಟ್ ಮಾರ್ಕೆಟ್ ನಿಂದ ಅಗ್ರಹಾರ ಕಡೆಗೆ ಬರುವ ರಸ್ತೆಯಲ್ಲಿದೆ ಎಂದರೆ ನಿಜ. ಆ ಘಟನೆ ಕಾಲಕ್ಕೆ ನಾನೇ ಕಾರನ್ನು ಓಡಿಸುತ್ತಿದ್ದೆ. ಆ ಕಾರು ನನ್ನ ಸ್ನೇಹಿತ ಗುರು ಇತನದ್ದು ಇದೆ. ಅದು ಬಿಳಿ ಬಣ್ಣದ್ದು ಇತ್ತು. ಜೆ.ಎಸ್.ಎಸ್ ಆಸ್ಪತ್ರೆಯಿಂದ ಅಗ್ರಹಾರಕ್ಕೆ ಹೋಗುವಾಗ ಆಸ್ಪತ್ರೆಯಿಂದ *200* ಅಡಿ ದೂರದಲ್ಲಿ ಚೌಲ್ಟ್ರಿ ಇದೆ ಎಂದರೆ ನಿಜ. ಆಸ್ಪತ್ರೆಯ ಮುಂಭಾಗ ಆಟೋ ನಿಲ್ದಾಣ ಇದೆ ಎಂದರೆ ನಿಜ. ಮಾರ್ಕೆಟ್ ನಿಂದ ಆಸ್ಪತ್ರೆಗೆ ಬರುವ ರಸ್ತೆಯ ಮಧ್ಯದಲ್ಲಿ ಮುಳ್ಳು ತಂತಿ ಮತ್ತು ಜಂಕ್ ಶೀಟ್ ಗಳು ಇವೆ ಎಂದರೆ ನಿಜ. ಆ ರಸ್ತೆಯಲ್ಲಿ ಬ್ರಿಡ್ಜ್ ನಿಂದ ದೇವಸ್ಥಾನದ ವರೆಗೆ ಮಧ್ಯದಲ್ಲಿ ಬ್ಯಾರಿಕೇಡ್ ಹಾಕಿದ್ದಾರೆ ಎಂದರೆ ನಿಜ. ಘಟನೆ ಕಾಲಕ್ಕೆ ಪವನ್ ಮತ್ತು ನವೀನ್ ಕಾರಿನ ಹಿಂಭಾಗದಲ್ಲಿ ಕುಳಿತಿದ್ದರು. ನನ್ನ ಪಕ್ಕ ಖಾಲಿ ಇತ್ತು. ಆ ಕಾಲಕ್ಕೆ ನಾವು ವೇಗವಾಗಿ ಬಂದಾಗ ಹಂಪ್ಸ್ ಕಂಡಿರಲಿಲ್ಲ ಎಂದರೆ ಸರಿಯಲ್ಲ. ಘಟನೆ ಕಾಲಕ್ಕೆ ಕಾರು *50* ಕಿಮೀ ಸ್ಪೀಡ್ ನಲ್ಲಿ

ಹೊಗುತ್ತಿತ್ತು. ಆಸ್ಪತ್ರೆಯ ಮುಂಭಾಗ *20-30* ಕಿಮೀ ಗಿಂತ ಜಾಸ್ತಿ ಓಡಿಸದಂತೆ ಸೂಚನಾ ಫಲಕ ಇದೆ ಎಂದರೆ ನೋಡಿಲ್ಲ.

*3.* ಹಂಪ್ಸ್ ಬಳಿ *10-15* ಜನ ಕಾರಿಗೆ ಅಡ್ಡ ಹಾಕಿದ್ದರು. ಆದರೆ ಯಾವ ಕಾರಣಕ್ಕೆ ಅಡ್ಡ ಹಾಕಿದ್ದರು ಎಂದು ಗೊತ್ತಿಲ್ಲ. ಆ *10-15* ಜನ ಯಾರೆಂದು ಗುರುತಿಸಲು ಆಗುವುದಿಲ್ಲ. ಆ ಸ್ಥಳದಲ್ಲಿ ಲೈಟ್ ಬೆಳಕು ಇರಲಿಲ್ಲ ಎಂದರೆ ನಿಜ. ಆ ದಿನ ಕಾರಿಗೆ ಅಡ್ಡ ಹಾಕಿದವರಿಗೆ ಏನಕ್ಕೆ ಎಂದು ಕೇಳುವಷ್ಟರಲ್ಲಿ ಜಗಳವಾಗಿತ್ತು. ಆ ಕಾಲಕ್ಕೆ ಅಲ್ಲಿ ಸೇರಿದ್ದವರು ಆಸ್ಪತ್ರೆ ಇರುವ ಕಾರಣ ನಿಧಾನಕ್ಕೆ ಓಡಿಸಲು ಆಗುವುದಿಲ್ಲವಾ ಎಂದು ನನ್ನನ್ನು ಕೇಳುತ್ತಿದ್ದರು ಎಂದರೆ ಸರಿಯಲ್ಲ. ಅವರು ಯಾವ ಕಾರಣಕ್ಕೆ ಅಡ್ಡ ಹಾಕಿದ್ದರು ಎಂದು ಗೊತ್ತಿಲ್ಲ. ಹಂಪ್ಸ್ ಎಗರಿಸಿದ್ದರಿಂದ ಕಾರು ಮುಳ್ಳು ಬೇಲಿಗೆ ಹೋಗಿ ತಾಕಿಕೊಂಡು ನಿಂತಾಗ ನಾನು ಕಾರಿನಿಂದ ಕೆಳಕ್ಕೆ ಬಿದಿದ್ದೆ ಎಂದರೆ ಸರಿಯಲ್ಲ ಮತ್ತು ಆ ಕಾರಣಕ್ಕೆ ನನಗೆ ಗಾಯಗಳಾಗಿತ್ತು ಎಂದರೆ ಸರಿಯಲ್ಲ. ಘಟನೆ ನಡೆದ ಕೂಡಲೇ ನಾನು ಕೆ.ಆರ್ ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿಲ್ಲ. ನವೀನ್ ಗೆ ಗಾಯಗಳಾಗಿದ್ದರಿಂದ ದೂರು ಕೊಡಲು ಹೋಗಿರಲಿಲ್ಲ. ನವೀನ್ ನನ್ನು ಸೀತಾರಂಗ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು. ರಾತ್ರಿ *2* ಗಂಟೆವರೆಗೆ ಸೀತಾರಂಗ ಆಸ್ಪತ್ರೆಯಲ್ಲಿ ಇದ್ದೆವು. ಆ ಕಾಲಕ್ಕೆ ನಾನು ಚಿಕಿತ್ಸೆ ಪಡೆದಿರಲಿಲ್ಲ. ಸೀತಾರಂಗ ಆಸ್ಪತ್ರೆಯಲ್ಲಿ ನವೀನ್ ಕುಮಾರ್ ಗೆ ಪ್ರಥಮ ಚಿಕಿತ್ಸೆ ಕೊಟ್ಟಿದ್ದರು. ಆ ಕಾಲಕ್ಕೆ ನಾನು ವೈದ್ಯರನ್ನು ಭೇಟಿ ಮಾಡಿಲ್ಲ. ಏನು ಚಿಕಿತ್ಸೆ ಕೊಟ್ಟಿದ್ದರು ಎಂದು ನವೀನ್ ಹೇಳಿದ್ದರಿಂದ ಗೊತ್ತಾಗಿತ್ತು. ಸೀತಾರಂಗ ಆಸ್ಪತ್ರೆಯಿಂದ ನವೀನ್ ನನ್ನು ಮನೆಗೆ ಕಳುಹಿಸಿ ನನ್ನ ಮನೆಗೆ ಹೋಗಿದ್ದೆ. ಅದೇ ದಿನ ದೂರು ಕೊಡಲು ತೊಂದರೆ ಇರಲಿಲ್ಲ. ನಾಳೆ ದೂರು ಕೊಟ್ಟರೆ ಆಯಿತು ಎಂದು ಮನೆಗೆ ಹೋಗಿದ್ದೆ. ಘಟನೆ ಸ್ಥಳದ ಅಕ್ಕಪಕ್ಕದಲ್ಲಿ ರಾತ್ರಿ ಡ್ಯೂಟಿ ಪೊಲೀಸರು ಇರುತ್ತಾರೆ ಎಂದರೆ ನಿಜ. ಆ ಕಾಲಕ್ಕೆ ಪೊಲೀಸರು ಆ ಸ್ಥಳಕ್ಕೆ ಬಂದಿರಲಿಲ್ಲ.

***4.*** ನಂತರ ಮರುದಿನ ಸಂಜೆ ***6-7*** ಗಂಟೆಗೆ ಪೊಲೀಸರು ಫೋನ್ ಮಾಡಿದಾಗ ನಾನು ಹೋಗಿದ್ದೆ. ಆ ಕಾಲಕ್ಕೆ ನಾನು ಹೇಳಿಕೆ ಕೊಟ್ಟಿಲ್ಲ. ನಾನು ಶೋಭಾ ಕ್ಲಿನಿಕ್ ನಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಇಲ್ಲ. ಮರುದಿನ ಪೋಲೀಸ್ ಠಾಣೆಗೆ ಹೋದಾಗ ನವೀನ್ ಮತ್ತು ಪವನ್ ಸಹ ಹಾಜರಿದ್ದರು. ಕೋರ್ಟ್ ಮುಂದೆ ಇರುವ ಆರೋಪಿತರನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಅವರನ್ನು ಪೋಲೀಸ್ ಠಾಣೆಯಲ್ಲಿ ತೋರಿಸಿದ್ದರು. ಆರೋಪಿತರ ಹೆಸರನ್ನು ಪೊಲೀಸರಿಗೆ ಯಾರು ಹೇಳಿದದರು ಎಂದು ಗೊತ್ತಿಲ್ಲ. ನಾನು ಪೊಲೀಸರಿಗೆ ಆರೋಪಿತರೇ ಹೊಡೆದಿದ್ದಾರೆ ಎಂದು ಹೇಳಿಕೆ ಕೊಟ್ಟಿಲ್ಲ. ಎಂ.ಒ-***1*** ರೇಜರ್ ಅನ್ನು ಕೋರ್ಟ್ ನಲ್ಲೇ ಮೊದಲ ಬಾರಿಗೆ ನೋಡಿದ್ದೇನೆ ಎಂದರೆ ನಿಜ. ಠಾಣೆಯಲ್ಲಿ ನವೀನ್ ಕುಮಾರ್ ಹೇಳಿದ್ದರಿಂದ ಆರೋಪಿತರೇ ಹೊಡೆದಿದ್ದರು ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೆ. ಆ ದಿನ ನಾವು ಮದ್ಯ ಸೇವನೆ ಮಾಡಿ ವೇಗವಾಗಿ ಕಾರು ಚಲಾಯಿಸಿದ್ದರಿಂದ ಅಲ್ಲಿ ಸೇರಿದ್ದ ಜನರು ನಮಗೆ ಬೈದಿದ್ದರು ಎಂದರೆ ಸರಿಯಲ್ಲ. ನನಗೆ ಹೇಗೆ ಗಾಯವಾಗಿತ್ತು ಎಂದು ಗೊತ್ತಿಲ್ಲ. ಪೊಲೀಸರು ಹೇಳಿದ್ದರ ಮೇರೆಗೆ ಆರೋಪಿತರೇ ಹೊಡೆದಿದ್ದಾರೆ ಎಂದು ಹೇಳುತ್ತಿದ್ದೇನೆ ಎಂದರೆ ನಿಜ.

**ಮರು ವಿಚಾರಣೆಃ- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**